ದಿನಾಂಕಃ 04-12-2025 ರಂದು **ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಆರ್. ಜಿ. ವಕೀಲರಿಂದ

1. ನಾನು ಐ. ಟಿ. ಐ. ಪದವೀಧರನಾಗಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಾನು ಪತ್ರಕರ್ತನಾಗಿರುತ್ತೇನೆ. ಆರೋಪಿ ನನಗೆ ಕಳೆದ 20 ವರ್ಷಗಳಿಂದ ಪರಿಚಯ ಇರುತ್ತಾರೆ. ಅವರು ನನ್ನ ನೆಂಟರು ಸಹ ಇರುತ್ತಾರೆ. ಆರೋಪಿಯು ಎಲೆಕ್ಟ್ರಿಕ್ ಸ್ಕೂಟರ್ ಶೋ ರೂಂ ನ್ನು ಪ್ರಾರಂಭಿಸುವುದಾಗಿ ಹೇಳಿ ಅದಕ್ಕೆ ಹಣದ ಅವಶ್ಯಕತೆ ಇರುತ್ತದೆ ಎಂದು ಹೇಳಿ ನನ್ನಿಂದ ಹಣ ಕೇಳಿದ್ದರು. ಒಮ್ಮೆ ನಾನು ಆರೋಪಿಯ ಮನೆಗೆ ಹೋಗಿದ್ದ ಸಮಯದಲ್ಲಿ ಆರೋಪಿ ನನ್ನಿಂದ ಹಣ ಕೇಳಿದ್ದರು. ಆರೋಪಿ ನನ್ನಿಂದ 5 ಲಕ್ಷ ರೂಪಾಯಿಗಳ ಸಾಲ ಕೇಳಿದ್ದರು. ಆರೋಪಿಗೆ ನಾನು ನಗದು ರೂಪದಲ್ಲಿ 5 ಲಕ್ಷ ರೂಪಾಯಿಗಳನ್ನು ನೀಡಿದ್ದೆನು. ನಾನು ಆರೋಪಿಗೆ ಹಣ ನೀಡುವ ಸಮಯದಲ್ಲಿ ಆರೋಪಿಯ ಗಂಡ ಹಾಗೂ ಮಗ ಹಾಜರಿದ್ದರು. ಸದರಿ 5 ಲಕ್ಷ ರೂಪಾಯಿಗಳ ಪೈಕಿ ನಾನು 2 ಲಕ್ಷ ರೂಪಾಯಿಗಳನ್ನು ನನ್ನ ಹೆಂಡತಿಯಿಂದ ಪಡೆದು ಉಳಿದ 3 ಲಕ್ಷ ರೂಪಾಯಿಗಳನ್ನು ನನ್ನ ಪಿ.ಡಬ್ಲ್ಯೂ.ಡಿ. ಕಾಂಟ್ರಾಕ್ಟ್ ನಿಂದ ಬಂದ ಆದಾಯದ ಮೊತ್ತ ಆಗಿರುತ್ತದೆ. ಸದರಿ 5 ಲಕ್ಷ ರೂಪಾಯಿ ನನ್ನ ಬಳಿ ಇತ್ತು ಎಂದು ತೋರಿಸುವ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಪಡಿಸಬಹುದು. ಬಡ್ಡಿ ಪಾವತಿಯ ಬಗ್ಗೆ ಯಾವುದೇ ಮಾತುಕತೆ ಆಗಿರಲಿಲ್ಲ.

2. ಆರೋಪಿ ಹಣವನ್ನು ಪಡೆದು ವಾಪಸ್ಸು ಕೊಡದೇ ಇದ್ದ ಕಾರಣ ನಾನು ಅವರ ಬಳಿ ಹಣ ಕೇಳಿದಾಗ ಅವರು ನನಗೆ ಚೆಕ್ಕನ್ನು ನೀಡಿದ್ದರು. ಸದರಿ ಚೆಕ್ಕನ್ನು ಆರೋಪಿಯೇ ಬರವಣಿಗೆ ಮಾಡಿ ನನಗೆ ನೀಡಿದ್ದರು. ನಿಪಿ.1 ಚೆಕ್ಕಿನಲ್ಲಿರುವ ಸಹಿಗೂ ಹಾಗೂ ಇತರೆ ಬರವಣಿಗೆಗಳಿಗೆ ಒಂದಕ್ಕೊಂದು ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ಆರೋಪಿ ತನಗೆ ಸೇರಿದ ಎಸ್.ಬಿ.ಐ. ಬ್ಯಾಂಕಿಗೆ ಸಂಬಂಧಿಸಿದ ಚೆಕ್ಕನ್ನು ನೀಡಿರುತ್ತಾರೆ. ಸದರಿ ಚೆಕ್ಕಿನ ಸಂಖ್ಯೆ ನನಗೆ ನೆನಪಿಲ್ಲ. ನಾನು ಸದರಿ ಚೆಕ್ಕನ್ನು ದಿನಾಂಕಃ 26-08-2022 ರಂದು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರು ಪಡಿಸಿದ್ದೆನು. ಆರೋಪಿಯು ಸದರಿ ದಿನಾಂಕದ ಒಂದು ವಾರ ಮೊದಲು ಸದರಿ

ಚೆಕ್ಕನ್ನು ನನಗೆ ನೀಡಿದ್ದರು.

3. ಆರೋಪಿಗೆ ಸೇರಿದ ಎಲೆಕ್ಟ್ರಿಕ್ ಸ್ಕೂಟರ್ ಶೋ ರೂಂ 2022 ನೇ ಇಸವಿಯ ಮೊದಲೇ ಪ್ರಾರಂಭವಾಗಿತ್ತು ಎಂದರೆ ಸರಿ. ಆ ಕಾರಣಕ್ಕೆ ಎಲೆಕ್ಟ್ರಿಕ್ ಸ್ಕೂಟರ್ ಶೋ ರೂಂ ಪ್ರಾರಂಭ ಮಾಡಬೇಕು ಎಂದು ಆರೋಪಿ ನನ್ನಿಂದ ಹಣ ಕೇಳಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿಯ ನಡುವೆ ಹಣಕಾಸಿನ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

4. ನನಗೆ ಒಟ್ಟು ಮೂರು ಜನ ಮಕ್ಕಳು ಇರುತ್ತಾರೆ. ದರ್ಶಿನಿ ಎಂಬುವವರು ನನ್ನ ಮಗಳು ಎಂದರೆ ಸರಿ. ನನ್ನ ಮಗಳು ದರ್ಶಿನಿಯವರನ್ನು ಆರೋಪಿಯ ಮಗ ವಿನಯ್ ರವರಿಗೆ ಕೊಟ್ಟು ಮದುವೆ ಮಾಡಿರುತ್ತೇವೆ ಎಂದರೆ ಸರಿ. ನನ್ನ ಮಗಳು ಮದುವೆಯಾದ ನಂತರ ಮೃತ ಹೊಂದಿರುತ್ತಾಳೆ ಎಂದರೆ ಸರಿ. ಆ ಬಗ್ಗೆ ನಾವು ಆರೋಪಿ ಹಾಗೂ ಅವರ ಕುಟುಂಬದವರ ವಿರುದ್ಧ ಪೋಲಿಸರಿಗೆ ದೂರು ನೀಡಿ ಆ ಬಗ್ಗೆ ಆರೋಪಿ ಹಾಗೂ ಅವರ ಕುಟುಂಬದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಚಂದ್ರಶೇಖರ ಎಂಬುವವರು ನನ್ನ ತಮ್ಮ ಇರುತ್ತಾರೆ. ದಿನಾಂಕಃ 13-04-2023 ರಂದು ನಾನು ಹಾಗೂ ಸದರಿ ಚಂದ್ರಶೇಖರ ರವರು ಆರೋಪಿಯ ಮನೆಗೆ ಹೋಗಿದ್ದೆವು ಎಂದರೆ ಸರಿಯಲ್ಲ. ಆ ರೀತಿ ನಾವು ಅವರ ಮನೆಗೆ ಹೋಗಿ ಕ್ರಿಮಿನಲ್ ಪ್ರಕರಣವನ್ನು ರಾಜಿ ಮಾಡಿಕೊಳ್ಳುವ ಬಗ್ಗೆ ಮಾತನಾಡಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ತನಗೆ ಸೇರಿದ ನಾಲ್ಕು ಚೆಕ್ಕುಗಳನ್ನು ನನ್ನ ತಮ್ಮ ಚಂದ್ರಶೇಖರ ರವರಿಗೆ ರಾಜಿ ಭದ್ರತೆಗಾಗಿ ನೀಡಿದ್ದರು ಎಂದರೆ ಸರಿಯಲ್ಲ. ಸದರಿ ನಾಲ್ಕು ಚೆಕ್ಕುಗಳ ಪೈಕಿ ನಾನು ಒಂದು ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಪ್ರಕರಣವನ್ನು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು )

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ನಾಗಮಂಗಲ.